**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 2794/2016**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

ರಮೇಶ ಎಸ್. --- ಆರೋಪಿತರು

**ಃದೋಷಾರೋಪಣೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ**

ರಮೇಶ ಎಸ್. 44 ವರ್ಷ,
ತಂದೆಃ ದಿ. ಸಿದ್ದ ಆಚಾರ್,
ವಾಸಃ ನಂಬ್ರ 18, 2ನೇ ತಿರುವು,
ಅನುಭವ ನಗರ, ನಾಗರಬಾವಿ,
ಬೆಂಗಳೂರು.

ಆಪಾದಿತರಾದ ನೀವು ಸಾಕ್ಷಿ1 ನೇಯವರನ್ನು ದಿ. 18.11.2005 ರಂದು ಹಿಂದೂ ಸಂಪ್ರದಾಯದಂತೆ ಕುಂದಾಪುರ ತಾಲೂಕು ಕೋಟೇಶ್ವರ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಮದುವೆಯಾಗಿದ್ದು, ಮದುವೆಯ ಸಮಯ ಆರೋಪಿಯು ಸಾಕ್ಷಿ1 ನೇಯವರ ಮನೆಯವರಿಂದ ವರದಕ್ಷಿಣೆ ರೂಪದಲ್ಲಿ 2,00,000/- ರೂಪಾಯಿ ಹಣವನ್ನು ಹಾಗೂ 24 ಪವನ್ ಚಿನಾಭರಣಗಳನ್ನು ಒತ್ತಾಯ ಪೂರ್ವಕವಾಗಿ ಪಡೆದಿದ್ದು, ಮದುವೆಯಾದ ನಂತರ ಸಾಕ್ಷಿ1 ನೇಯವರನ್ನು ಸಾಂಸಾರಿಕ ಜೀವನ ನಡೆಸುವರೆ ಆರೋಪಿಯು ತನ್ನ ಮನೆಯಾದ ಬೆಂಗಳೂರಿನ ನಾಗರಬಾವಿ ಅನುಭವನಗರ 2ನೇ ಕ್ರಾಸ್ ಎಂಬಲ್ಲಿಗೆ ಕರೆದುಕೊಂಡು ಹೋಗಿದ್ದು ಮದುವೆಯಾದ 2 ತಿಂಗಳಲ್ಲಿಯೇ ಅಂದರೆ ದಿ. 27.01.2006 ರಂದು ಆರೋಪಿಯು ಸಾಕ್ಷಿ1 ನೇಯವರಿಗೆ ನೀನು ಮತ್ತು ನಿಮಂ ಮನೆಯವರು ಸರಿ ಇಲ್ಲ, ನಾವು ಕೇಳಿದಷ್ಟು ವರದಕ್ಷಿಣೆಯನ್ನು ಕೊಟ್ಟಿಲ್ಲ ಎಂದು ಅವಾಚ್ಯ ಶಬ್ದದಿಂದ ಬೈದು ನೀನು ವರದಕ್ಷಿಣೆ ತಂದಿದ್ದು ಕಮ್ಮಿಯಾಯಿತು ತವರು ಮನೆಗೆ ಹೋಗಿ ಇನ್ನೂ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಇಲ್ಲದೇ ಇದ್ದಲ್ಲಿ ನಮ್ಮ ಮನೆಯಲ್ಲಿ ಜಾಗವಿಲ್ಲ ಎಂದು ಪದೇಪದೇ ಹೇಳಿ ಅವಾಚ್ಯ ಶಬ್ದದಿಂದ ಬೈದು ಹೊಡೆದು, ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದು. 2015 ರಲ್ಲಿ 2 ಬಾರಿ ಆರೋಪಿತರಾದ ನೀವು ಸಾಕ್ಷಿ1 ನೇಯವರ ಮನೆಗೆ ಬಂದು ಸಾಕ್ಷಿ1 ನೇಯವರನ್ನುದ್ದೇಶಿಸಿ ಅವಾಚ್ಯ ಶಬ್ದದಿಂದ ಬೈದು ಹೊಡೆದು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿ ನೀನು ಇನ್ನೂ ಹೆಚ್ಚಿನ 2,00,000/- ರೂಪಾಯಿ ವರದಕ್ಷಿಣೆ ಹಣವನ್ನು ತರದಿದ್ದರೆ ನಿನ್ನನ್ನು ನನ್ನ ಮನೆಗೆ ಸೇರಿಸಿಕೊಳ್ಳುವುದಿಲ್ಲ, ನಾನು ಬೇರೆ ಹುಡುಗಿಯನ್ನು ಮದುವೆಯಾಗುತ್ತೇನೆ ಎಂದು ಬೆದರಿಕೆ ಹಾಕಿ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಆಪಾದಿತರಾದ ನೀವು ಸಾಕ್ಷಿ1 ನೇಯವರಿಗೆ ಕೈಯಿಂದ ಕೆನ್ನೆಗೆ ಮುಖಕ್ಕೆ ಹೊಡೆದು ಸಾದಾ ಸ್ವರೂಪದ ನೋವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಆಪಾದಿತರಾದ ನೀವು ಸಾಕ್ಷಿ1 ನೇಯವರಿಗೆ ನೀನು ಸೂಳೆ, ರಂಡೆ, ಲೋಫರ್ ಮುಂಡೇ, ಬೇವರ್ಸಿ ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಆಪಾದಿತರಾದ ನೀವು ಸಾಕ್ಷಿ1 ನೇಯವರಿಗೆ ಹೆಚ್ಚಿಗೆ ಹಣ ತರದಿದ್ದರೆ ನಿನ್ನನುನ ನನ್ನ ಮನೆಗೆ ಸೇರಿಸಿಕೊಳ್ಳುವುದಿಲ್ಲ ನಾನು ಬೇರೆ ಹುಡುಗಿಯನ್ನು ಮದುವೆಯಗುತ್ತೇನೆ ನನ್ನ ಮದುವೆಗೆ ಅಡ್ಡ ಬಂದರೆ ನಿನ್ನನ್ನು ಹಾಗೂ ನಿನ್ನ ತಾಯಿ, ಸಹೋದರರನ್ನು ಕೊಂದೆ ಮುಗಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. ಆರೋಪಿತರಾದ ನೀವು ಚಾ.ಸಾ.1ನೇಯವರ ಮನೆಯಿಂದ ವರದಕ್ಷಿಣೆ ಹಣ ಮತ್ತು ಚಿನ್ನವನ್ನು ಪಡೆದುಕೊಂಡಿದ್ದು, ಆ ಮೂಲಕ ನೀವು ಕಲಂ 3 ರ ವರದಕ್ಷಿಣೆ ನಿಷೇಧ ಕಾಯ್ದೆ ಯಂತೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

6. ಮದುವೆಯ ನಂತರ ಆರೋಪಿತರಾದ ನೀವು ಸಾಕ್ಷಿ 1 ನೇಯವರಲ್ಲಿ ಹೆಚ್ಚಿನ ವರದಕ್ಷಿಣೆ ತರುವಂತೆ ಪೀಡಿಸಿರುತ್ತೀರಿ. ಆ ಮೂಲಕ ನೀವು ಕಲಂ 4 ರ ವರದಕ್ಷಿಣೆ ನಿಷೇಧ ಕಾಯ್ದೆ ಯಂತೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

7. ಮದುವೆಯ ಪೂರ್ವದಲ್ಲಿ ಮದುವೆ ಮಾತುಕತೆ ಸಮಯದಲ್ಲಿ ಆರೋಪಿತರಾದ ನೀವು ಸಾಕ್ಷಿ 1 ರವರ ಮನೆಯಿಂದ ಪಡೆದ ವರದಕ್ಷಿಣೆ ಹಣವನ್ನು ಸಾಕ್ಷಿ 1 ರವರ ಖರ್ಚು ವೆಚ್ಚ ನಿರ್ವಹಣೆಗೆ ವಿನಿಯೋಗಿಸದೇ, ಆ ಮೂಲಕ ನೀವು ಕಲಂ 6 ರ ವರದಕ್ಷಿಣೆ ನಿಷೇಧ ಕಾಯ್ದೆ ಯಂತೆ ಶಿಕ್ಷಾರ್ಹವಾ ದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 3.09.2024.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ :2794/2016**

ಫಿರ್ಯಾದುದಾರರು : ಸರಕಾರದ ಪರವಾಗಿ ಕುಂದಾಪುರ ಗ್ರಾಮಾಂತರ ಠಾಣಾ ಪೋಲಿಸರು,

- ವಿರುದ್ಧ-

ಆರೋಪಿ : ರಮೇಶ ಎಸ್. ತಂದೆಃ ದಿ. ಸಿದ್ದ ಆಚಾರ್,

1. ಮೇಲೆ ಹೇಳಿದಂತೆ ನಿಮಗೆ ಓಡಿ ಹೇಳಿ ವಿವರಿಸಿದ ದೋಷಾರೋಪಣಾ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?

ಉ.

2. ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.?

ಉ.

ಮೇಲ್ಕಂಡ ದೋಷಾರೋಪಣಾ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬೆರದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.